**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1039/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.04**

**ದಿನಾಂಕಃ 24.01.2026** **ಸಿಡಬ್ಲ್ಯೂ.05**

| | |
|---|---|
| ಹೆಸರು | ಹನುಮಂತ ನಾಯ್ಕ |
| ತಂದೆ ಹೆಸರು | ನಾರಾಯಣ ನಾಯ್ಕ |
| ವಯಸ್ಸು | 29 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಕುಮಾರನಹಳ್ಳಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1 ರಿಂದ 4 ಮತ್ತು 6 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ. ಈಗ್ಗೆ 3 ವರ್ಷಗಳ ಹಿಂದೆ ಬೆಳಿಗ್ಗೆ 7.30 ಗಂಟೆಗೆ ಚಾಸಾ.4 ರವರು ನನ್ನನ್ನು ಅವರ ಹೊಲದಲ್ಲಿ ಕೆಲಸ ಮಾಡಲೆಂದು ಕರೆದಿದ್ದರು. ನಾನು ಸಾಮಾನು ತರಲು ಚಾಸಾ.4 ರವರ ಮನೆ ಹತ್ತಿರ ಹೋಗಿದ್ದೆ. ಸದರಿ ಸಂದರ್ಭದಲ್ಲಿ ಗಲಾಟೆಯಾಗುತ್ತಿತ್ತು. ಸದರಿ ಸಂದರ್ಭದಲ್ಲಿ ಚಾಸಾ.4, 1 ಮತ್ತು ಅವರ ಅಣ್ಣ ಹಾಗೂ ಅಣ್ಣನ ಕುಟುಂಬಸ್ಥರೊಂದಿಗೆ ಗಲಾಟೆಯಾಗುತ್ತಿತ್ತು. ಸದರಿ ಸಂದರ್ಭದಲ್ಲಿ 2 ನೇ ಆರೋಪಿ ಚಾಸಾ.1 ರವರಿಗೆ ಕೆಟ್ಟ ಕೆಟ್ಟದಾಗಿ ಬೈಯುತ್ತಿದ್ದರು. ಸದರಿ ಜಗಳ ಅವರ ಹೊಲದ ದಾರಿಯ ಸಲುವಾಗಿ ಆಗುತ್ತಿತ್ತು. ಪೊಲೀಸರಿಗೆ ನಾನು ಈ ಎಲ್ಲಾ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ಗಲಾಟೆ ಸಂದರ್ಭದಲ್ಲಿ 2 ನೇ ಆರೋಪಿ ಚಾಸಾ.1 ರವರ ಕೂದಲು ಹಿಡಿದು ಎಳೆದಾಡಿ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಹೇಳಿದರು ಎಂದರೆ ಸರಿ. ಅದೇ ರೀತಿ 1 ನೇ ಆರೋಪಿ ಚಾಸಾ.1 ಮತ್ತು 4 ರವರಿಗೆ ತಮ್ಮ ಕೈಕಾಲುಗಳಿಂದ ಅವರ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. ನಂತರ ದಿಃ 29.11.2022 ರಂದು ರಾತ್ರಿ 8.00 ಗಂಟೆಗೆ ಚಾಸಾ.1 ರವರು ಈ ವಿಚಾರವಾಗಿ ದೂರು ನೀಡಿರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ಆರೋಪಿತರು 3 ನೇ ಆರೋಪಿಯ ಮಾತು

ಕೇಳಿಕೊಂಡು ಈ ರೀತಿ ಗಲಾಟೆ ಮಾಡಿರುತ್ತಾರೆ ಎಂದರೆ ಸರಿ. ಈ ವಿಚಾರವಾಗಿಯೂ ಸಹ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆರೋಪಿತರು ಚಾಸಾ.1 ರವರ ಮೇಲೆ ಯಾವುದೇ ರೀತಿಯ ಹಲ್ಲೆ ಮಾಡಿಲ್ಲ ನಾನು ಹೇಳಿರುವುದು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ನೀವು ಚಾಸಾ.1 ರವರ ಜಮೀನಿನಲ್ಲಿ ಖಾಯಂ ಆಗಿ ಕೆಲಸ ಮಾಡುತ್ತೀರಾ ಎಂದರೆ ಸಾಕ್ಷಿಯು ಕೆಲಸಕ್ಕೆ ಯಾರೇ ಕರೆದರೂ ಕೆಲಸ ಮಾಡುತ್ತೇನೆ ಎಂದು ನುಡಿಯುತ್ತಾರೆ. ನಾನು ಘಟನೆ ನೋಡದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆಯಾದ ಸ್ಥಳದಲ್ಲಿ ಕೂದಲು ಅಥವಾ ರಕ್ತದ ಕಲೆ ಇದ್ದ ಬಗ್ಗೆ ನಾನು ಗಮನಿಸಿಲ್ಲ. ಚಾಸಾ.1 ರವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ